

ಸಲ್ಲಿಸಿ, ಒಂದು ಬಗೆಯ ಅಳುಕಿನಿಂದಲೇ ಶಾಲೆಗೆ ಹೊರಡುತ್ತಿದ್ದೆ. ಶಾಲೆಯ ಗೇಟು ಹಾದರೆ ಮುಂದಕ್ಕೆ ಹೆಜ್ಜೆಯಿಡಲು ಕಾಲೇ ಬರುತ್ತಿರಲಿಲ್ಲ. ಹಾಗಿರುತ್ತಿತ್ತು ನನ್ನ ಕಲಿಕೆ! ಫಲಿತಾಂಶ ಹೇಳಲು ಇನ್ನೂ ಕೆಲವು ಗಂಟೆಗಳು ಬಾಕಿಯಿರುವಾಗಲೇ ಗೊತ್ತೇ ಆಗದಂತೆ ಕಣ್ಣೀರು ಬರುತ್ತಿತ್ತು. ಎಲ್ಲರೂ ಆಟವಾಡಿಕೊಂಡು ಕುಣಿಯುತ್ತಿದ್ದರೆ, ನಾನು ಮೈದಾನದ ಮೂಲೆಯಲ್ಲಿ ನಿಂತಿರುತ್ತಿದ್ದೆ. ನನ್ನ ತರದವರೇ ಯಾರಾದರೂ ಬೃಹಸ್ಪತಿಗಳು ಜೊತೆಗಿದ್ದಾರಾ ಎಂದು ಎಲ್ಲರ ಮುಖವನ್ನೂ ಅವಲೋಕಿಸಿದರೆ ಯಾವನೂ ನನ್ನಷ್ಟು ತಲೆಕೆಡಿಸಿಕೊಳ್ಳದೆ ಇಂದು ಬಸ್ಸಲ್ಲಿ ಸಿಕ್ಕ ಮಕ್ಕಳಂತೆ ನಿರಾಳವಾಗಿ ಆಟವಾಡುತ್ತಿದ್ದರು. ನಮ್ಮ ಮೇಷ್ಟ್ರ ಮೇಡಂಗಳೆಲ್ಲಾ ಫಲಿತಾಂಶದ ದಿನ ವರಕೊಡುವ ದೇವತೆಗಳಂತೆ ಕಂಡು, ಅವತ್ತು ಮಾತ್ರ ಗುರುದೇವೋಭವದ ಕಲ್ಪನೆ ಗಟ್ಟಿಯಾಗುತ್ತಿತ್ತು.

'ಎಲ್ರೂ ಪ್ರೇಯರಿಗೆ ನಿಂತಂಗೆ ಸಾಲಾಗಿ ಬಂದು ನಿಂತ್ಕಳ್ಳಿ' ಎಂಬ ಅನೌನ್ಸ್ ಮಾಡಿದಾಕ್ಷಣ ಜೀವ ಕೈಯಲ್ಲಿಟ್ಟುಕೊಂಡು ನಿಲ್ಲುತ್ತಿದ್ದೆವು. ಒಂದೊಂದೇ ತರಗತಿಯ ಮೇಲುಸ್ತುವಾರಿಯ ಶಿಕ್ಷಕರು ತಮ್ಮ ತಮ್ಮ ತರಗತಿಯ ಫಲಿತಾಂಶ ಘೋಷಿಸುತ್ತಿದ್ದರು. ನಮ್ಮ ತರಗತಿಯ ಸರದಿ ಬಂದಾಗ 'ಕೊಂಡಯ್ಯ, ರಾಮಚಂದ್ರ ಇಬ್ಬರು ಬಿಟ್ಟು ಉಳಿದವರೆಲ್ಲಾ ಪಾಸು' ಎಂದು ಒಂದೇ ಸಾಲಲ್ಲಿ ರಿಸಲ್ಟ್ ಹೇಳಿದಾಕ್ಷಣ – 'ಓ...' ಅಂತ ಕೂಗಿ ನಮ್ಮ ವಿಜಯೋತ್ಸವದ ಕಹಳೆ ಮೊಳಗಿಸುತ್ತಿದ್ದೆವು. ಅಂತೂ ದೇವರು ಕೈ ಬಿಡುತ್ತಿರಲಿಲ್ಲ. ದೇವರ ಮೇಲಿನ ಭಕ್ತಿ ಮತ್ತಷ್ಟು ವೃದ್ಧಿಸುತ್ತಿತ್ತು. ಅದ್ಯಾಕೋ ಫೇಲಾದ ಹುಡುಗರು ಫಲಿತಾಂಶದ ದಿನ ಶಾಲೆಗೆ ಬರುತ್ತಿರಲಿಲ್ಲ. ಅವರ ಸುದೀರ್ಘ ಗೈರುಹಾಜರಾತಿಗಾಗಿಯೇ ಫೇಲಾಗಿರುತ್ತಿದ್ದರೋ ಏನು ಕಥೆಯೋ, ಅಂತೂ ಫೇಲಾದವರ ಅಳು ಮುಖ ನೋಡುವ ಕಷ್ಟ ತಪ್ಪುತ್ತಿತ್ತು.



ಹತ್ತನೇ ತರಗತಿಗೆ ಬಂದರೂ ನಾನು ಕಲಿಕೆಯಲ್ಲಿ ತುಂಬಾ ಹಿಂದೆ ಬಿದ್ದಿದ್ದೆ. ನನ್ನ ಪಾಲಿಗೆ ಓದು ಎಂದರೆ ಕಾದಂಬರಿಗಳು ಮಾತ್ರ. ಒಂಬತ್ತನೆಯ ತರಗತಿಯಲ್ಲೇ 'ಗೃಹಭಂಗ' ಓದಿ ಖುಷಿಪಟ್ಟಿದ್ದೆ. ತ.ರಾ.ಸು. ಅವರ ಐತಿಹಾಸಿಕ ಕಾದಂಬರಿಗಳೆಂದರೆ ಪಂಚಪ್ರಾಣ. ನಮ್ಮ ಲೆಕ್ಕದ ಮೇಷ್ಟ್ರು ಸತ್ಯಣ್ಣ ರೆಡ್ಡಿ ಎಂಬುವವರು ತುಂಬ ಚೆನ್ನಾಗಿ ಪಾಠ ಹೇಳುತ್ತಾರೆಂದು ಎಲ್ಲರಿಂದಲೂ ಪ್ರಶಂಸೆಗೊಳಗಾದವರು, ಅವರಿಂದಲೂ ನನಗೆ ಲೆಕ್ಕ ಕಲಿಸಲಾಗಲಿಲ್ಲ! ಟೆಸ್ಟ್ ಪೇಪರ್ ಕೊಡುವಾಗ, ಮಧ್ಯವಾರ್ಷಿಕ ಪರೀಕ್ಷೆಯ ಮಾರ್ಕ್ಸ್ ಹೇಳುವಾಗ, 'ಮಹಾನ್ ಮಹಾನ್ ಸಾಹಿತ್ಯಪ್ರೇಮಿ, ವಿದ್ವಾನ್ ಸತ್ಯನಾರಾಯಣ ಅವರಿಗೆ ಎಂಟು ಅಂಕಗಳು' ಎಂದು ನಾಟಕೀಯವಾಗಿ ಹೇಳಿದಾಗ ಇಡೀ ತರಗತಿ ಗೊಳ್ ಎಂದು ನಗುತ್ತಿತ್ತು. ಅಚ್ಚರಿಯೆಂದರೆ, ನನಗೆ ಚೂರೂ ನಾಚಿಕೆಯಾಗುತ್ತಿರಲಿಲ್ಲ. ಅಯ್ಯೋ ದೇವರು ಪಾಸು ಮಾಡ್ತಾನೆ ಬಿಡು ಅಂದ್ಕೊಂಡು ಆರಾಮಾಗಿರುತ್ತಿದ್ದೆ. ಸತ್ಯಣ್ಣರೆಡ್ಡಿಯವರ ನೆನಪಿನ ಶಕ್ತಿ ಅದ್ಭುತ. ಎಲ್ಲರ ಅಂಕಗಳನ್ನೂ ಪೇಪರ್ ನೋಡಿಕೊಳ್ಳದೆ ಹೇಳುತ್ತಿದ್ದರು!

ಮೂತ್ರವಿಸರ್ಜನೆಗೆ ನಮಗೆಲ್ಲಾ ಶಾಲೆಯ ಮೂಲೆಯ ಮೈದಾನವೇ ಗತಿಯಾಗಿದ್ದರಿಂದ ಆ ಬಿಡುವಿನಲ್ಲಿ ಗೆಳೆಯರೆಲ್ಲಾ ಗುಂಪಾಗಿ ಮಾತಾಡುತ್ತಾ ಉಚ್ಚೆ ಹೊಯ್ಯುತ್ತಿದ್ದೆವು. ಆಗ ಕೆಲವರು 'ಲೇ ಎಕ್ಕದ ಗಿಡ ದೇವರಂತೆ ಕಣೋ, ಅದರ ಮೊಗ್ಗನ್ನು ಹಿಚುಕಿದಾಗ ಫಟ್ ಅಂತ ಶಬ್ದ ಬಂದರೆ ನಾವು ಮನಸಲ್ಲಿ ಅನ್ಕೊಂಡಿದ್ದು ನಿಜವಾಗುತ್ತಂತೆ' ಎಂದು ಹೇಳಿ, ಒಂದೊಂದೇ ಸಬ್ಜೆಕ್ಟಿನ ಹೆಸರು ಹೇಳಿ ಮೊಗ್ಗನ್ನು ಫಟ್ ಅನ್ನಿಸಿ, 'ಓ ನಾನ್ ಎಲ್ಲಾ ಪಾಸು' ಅಂತ ಆನಂದಿಸುತ್ತಿದ್ದರು. ಕೆಲವರದ್ದು ಗಣಿತ ಠುಸ್ ಅನ್ನುತ್ತಿತ್ತು, ಇನ್ನು ಕೆಲವರದು ವಿಜ್ಞಾನ. ನಾನು ಇದನ್ನೆಲ್ಲಾ ನಂಬೊಲ್ಲ ಅಂತ ಬಾಯಲ್ಲಿ ಹೇಳಿದರೂ ಎಕ್ಕದ ಮೊಗ್ಗನ್ನು ಹಿಚುಕುವ ಪ್ರಯತ್ನ ಬಿಡುತ್ತಿರಲಿಲ್ಲ. ಒಮ್ಮೆ ಒಬ್ಬನೇ ಹೋಗಿ ಮನೆಯ ಹತ್ತಿರವಿದ್ದ ಎಕ್ಕೆಗಿಡಕ್ಕೆ ಕೈ ಮುಗಿದು, ಒಂದೊಂದೇ ಸಬ್ಜೆಕ್ಟಿನ ಹೆಸರು ಹೇಳಿ ಮೊಗ್ಗನ್ನು ಒತ್ತಿ ಅದುಮತೊಡಗಿದೆ. ಎಷ್ಟು ಸಲ ಪ್ರಯತ್ನಿಸಿದರೂ ಹಾಳಾದ್ದು ಒಂದಾದರೂ ಫಟ್ ಅಂದು ಸಂತೋಷಪಡಿಸಬಾರದೆ! ಆರು ಸಬ್ಜೆಕ್ಟ್‌ಗಳಲ್ಲೂ ಠುಸ್ಸೋ ಠುಸ್ಸು. ಆತಂಕದಲ್ಲಿಯೇ ಮನೆಗೆ ಬಂದು ಕೈ ತೊಳೆದುಕೊಂಡು ತೆಪ್ಪಗಾದೆ.

ಫಲಿತಾಂಶಕ್ಕೆ ಸಂಬಂಧಿಸಿದ ಎರಡು ಘಟನೆಗಳನ್ನು ಏನು ಮಾಡಿದರೂ ಮರೆಯಲಾಗಿಲ್ಲ. ಎಸ್.ಎಸ್.ಎಲ್.ಸಿ. ಪರೀಕ್ಷೆ ಮುಗಿದ ಮೇಲೆ ರಜೆ ಇದ್ದುದ್ದರಿಂದ ಮನೆಯಲ್ಲಿ ನನ್ನ ಉಪನಯನ ಮಾಡುವ ಯೋಚನೆ ಮಾಡಿದರು. ನಮ್ಮಲ್ಲಿ ಈ ಬಗೆಯ ಆಚರಣೆಗೆ ಬಹಳ ಮಹತ್ವವಿರುವುದರಿಂದ ಮದುವೆಗೆ ಸೇರಿದಂತೆ ಜನ ಸೇರುತ್ತಾರೆ. ಹುಡುಗಿ ತಯಾರಾಗಿದ್ದರೆ ಮದುವೆಯನ್ನೇ ಮುಗಿಸಿಬಿಡಬಹುದು, ಅಷ್ಟು ಖರ್ಚುವೆಚ್ಚದ ಸಮಾರಂಭವದು. ನನ್ನ ಉಪನಯನಕ್ಕೆ ತುಂಬ ಜನ ಸೇರಿದ್ದರು. ನೆಂಟರೆಲ್ಲ ಮೂರ್ನಾಲ್ಕು ದಿನ ಮೊದಲೇ ಬಂದಿಳಿದಿದ್ದರು. ಉಪನಯನದ ದಿನ ಎಲ್ಲರೂ ನನ್ನ ತಲೆಮೇಲೆ ಅಕ್ಷತೆ ಹಾಕಿ ಚೆನ್ನಾಗಿ ಬಾಳೆಂದು ಆಶೀರ್ವಾದ ಮಾಡಿದ್ದೇ ಮಾಡಿದ್ದು. ಮಧ್ಯಾಹ್ನದ ಊಟ ಮುಗಿಸಿ, ಎಲ್ಲರೂ ವಿರಾಮದಲ್ಲಿ ಹರಟೆ ಹೊಡೆಯುತ್ತಿದ್ದಾಗ ಯಾರೋ ಬಂದು 'ಎಸ್.ಎಸ್.ಎಲ್.ಸಿ. ರಿಸಲ್ಟ್